**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 140/2015**

**ಫ್ರಾಸಾ- 30 ಚಾಸಾ- 52**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ವಿನಯ್ ಎ ವಿ |
| ತಂದೆಯ ಹೆಸರುಃ | : | ವಾಸಪ್ಪ |
| ವಯಸ್ಸುಃ | : | 49 ವರ್ಷ |
| ಉದ್ಯೋಗಃ | : | ಪೊಲೀಸ್ ನಿರೀಕ್ಷಕರು |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 17-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಆಗಸ್ಟ್ 2011 ರಿಂದ ಅಕ್ಟೋಬರ್ 2013ರವರೆಗೆ ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ26-7-13ರಂದು ಮೇಲಧಿಕಾರಿಗಳ ಆದೇಶದಂತೆ ಬೆಳಿಗ್ಗೆ 4-50ಗಂಟೆಗೆ ಹಾಸನ ಲೋಕಾಯುಕ್ತ ಕಛೇರಿಯ ಪೊಲೀಸ್ ಉಪಾಧೀಕ್ಷಕರ ಮುಂದೆ ವರದಿ ಮಾಡಿಕೊಂಡಿರುತ್ತೇನೆ. ಅವರು ಈ ಪ್ರಕರಣದ ವಿಚಾರವನ್ನು ತಿಳಿಸಿ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರನ್ನು ನನಗೆ ಪರಿಚಯಿಸಿದರು ಅಲ್ಲದೆ ಮೂಲ ಶೋಧನಾ ವಾರೆಂಟನ್ನು ಲಕೋಟೆಯಲ್ಲಿ ನೀಡಿ ಅದನ್ನು ತೆರೆದು ನಂತರ ಜಾರಿ ಮಾಡಿ ಶೋಧನೆ ನಡೆಸಲು ಸೂಚಿಸಿದರು. ಅದರಂತೆ ನಾನು ನನ್ನ ಸಿಬ್ಬಂದಿಗಳಾದ ಚಾಸಾ-49 ಮತ್ತು 50ರೊಂದಿಗೆ ಹಾಗೂ

ಮೇಲೆ ಹೇಳಿದ ಪಂಚರೊಂದಿಗೆ ಬೆಳಿಗ್ಗೆ 5-30ಗಂಟೆಗೆ ಹಾಸನ ಲೋಕಾಯುಕ್ತ ಕಛೇರಿ ಬಿಟ್ಟು ಹಾಸನದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಎದುರಿನಲ್ಲಿರುವ ಕೆ ಹೆಚ್ ಬಿ ಕಾಲೋನಿಯ ನಿವೇಶನಕ್ಕೆ 1442ಕ್ಕೆ ಬೆಳಿಗ್ಗೆ 5-55ಗಂಟೆಗೆ ಹೋದೆವು. ನನಗೆ ನೀಡಿದ ಶೋಧನಾ ವಾರೆಟನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-64 ಎಂದು ಗುರುತಿಸಿರುತ್ತದೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-64(ಸಿ) ಎಂದು ಗುರುತಿಸಲಾಯಿತು.

3.ನಂತರ ಆ ಮನೆಯಲ್ಲಿದ್ದ ಒಬ್ಬ ವ್ಯಕ್ತಿಯನ್ನು ಕೇಳಿದಾಗ ಅವರು ತಾನು ಆರೋಪಿತರ ಮಗನೆಂದು ತಿಳಿಸಿದರು. ಅವರಿಗೆ ಶೋಧನಾ ವಾರೆಂಟಿನ ವಿಚಾರ ತಿಳಿಸಿ ಶೋಧನಾ ವಾರೆಟನ್ನು ತೋರಿಸಿ ಅದಕ್ಕೆ ಸಹಿ ಪಡೆದುಕೊಂಡೆನು. ಅದಕ್ಕೆ ನಾನು ಮತ್ತು ಪಂಚರು ಸಹಿ ಹಾಕಿದೆವು. ಸದರಿ ನಿವೇಶನದಲ್ಲಿ 3 ಅಂತಸ್ತಿನ ನಿರ್ಮಾಣ ಹಂತದ ಮನೆ ಇತ್ತು. ಮನೆಯನ್ನು ಪರಿಶೀಲಿಸಿದಾಗ ಮನೆಯ ಮುಂಭಾಗದಲ್ಲಿ ಒಂದು ಟಾಟಾ ಸುಮೋ ವಾಹನ ಸಂಖ್ಯೆಕೆಎ-13-ಎನ್-2786 ಇತ್ತು. ಅದರ ಮೀಟರ್ ರೀಡಿಂಗ್ 315340 ಆಗಿತ್ತು.

4.ಮನೆಯ ಮುಖ್ಯದ್ವಾರದ ಬಳಿ ಗ್ರ್ಯಾನೈಟ್ ಸ್ಲ್ಯಾಬ್ ಗಳು ಇದ್ದವು. ಅದರ ಅಂದಾಜು ಬೆಲೆ ಸುಮಾರು 20000ರೂ ಆಗಿತ್ತು. ನಂತರ ನೆಲಅಂತಸ್ತನ್ನು ಪರಿಶೀಲಿಸಿದಾಗ ಅದು ಕಾಮಗಾರಿ ಹಂತದಲ್ಲಿದ್ದು ನೆಲಕ್ಕೆ ಸಿಮೆಂಟ್ ಟೈಲ್ಸ್ ಹಾಕಿರಲಿಲ್ಲ. ಅದರ ಒಂದು ರೂಮಿನಲ್ಲಿ ಸುಮಾರು 1,50,000ರೂ ಮೌಲ್ಯದ ಮನೆಯ ಕಿಟಕಿ ಮತ್ತು ಬಾಗಿಲುಗಳ ತಯಾರಿಕೆಗೆ ಬೇಕಾಗುವ ಅಕೇಷಿಯಾ ಮತ್ತು ತೇಗದ ಮರದ ವಸ್ತುಗಳು ಇದ್ದವು. 1 ರಿಂದ 3ನೇ ಅಂತಸ್ತನ್ನು ಪರಿಶೀಲಿಸಿದಾಗ ಇನ್ಯಾವುದೇ ವಸ್ತುಗಳು ಸಿಗಲಿಲ್ಲ. ಈ ಎಲ್ಲ ವಿಚಾರವಾಗಿ ನಿಪಿ-63ರಂತೆ ಮಹಜರು ತಯಾರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-63(ಬಿ) ಎಂದು

ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರವಾಗಿ ಶ್ರೀ ಸಿ ಎನ್ ವಿ ವಕೀಲರಿಂದಃ**

ಆ ಮನೆಗೆ ಕಿಟಕಿ ಬಾಗಿಲುಗಳನ್ನು ಅಳವಡಿಸಿರಲಿಲ್ಲ ಎಂದರೆ ಸಾಕ್ಷಿಯು ನೆಲಅಂತಸ್ತಿನಲ್ಲಿ ಅವುಗಳ ತಯಾರಿಕೆಗೆ ಬೇಕಾಗುವ ವಸ್ತುಗಳನ್ನು ಇಟ್ಟಿದ್ದ ಕೊಠಡಿಗೆ ಮಾತ್ರ ಬಾಗಿಲು ಅಳವಡಿಸಿದ್ದರು ಎನ್ನುತ್ತಾರೆ. ಅಲ್ಲಿ ಯಾರೂ ವಾಸ ಮಾಡುವ ಕುರುಹುಗಳು ಕಂಡುಬರಲಿಲ್ಲ ಮತ್ತು ಯಾರೂ ಕೂಡ ವಾಸ ಇರಲಿಲ್ಲ.

2.ಅಲ್ಲಿದ್ದ ವಾಹನವನ್ನು ಹೊಸದಾಗಿ ಖರೀದಿಸಿದ್ದೋ ಅಥವಾ ಸೆಕೆಂಡ್ ಹ್ಯಾಂಡ್ ಖರೀದಿಸಿದ್ದೋ ಎಂದು ನನಗೆ ಯಾವುದೇ ಮಾಹಿತಿ ಸಿಕ್ಕಿಲ್ಲ. ಅಲ್ಲಿ ಕಂಡುಬಂದ ಗ್ರ್ಯಾನೈಟ್ ಕೆಂಪುಬಣ್ಣದ್ದಾಗಿದ್ದು ಅದನ್ನು ಏನಂದು ಕರೆಯುತ್ತಾರೆಂದು ನನಗೆ ಗೊತ್ತಿಲ್ಲ. ಅದು ಯಾವ ವಿಧದ ಗ್ರ್ಯಾನೈಟ್ ಎಂದು ನನಗೆ ಗೊತ್ತಾಗದೇ ಇದ್ದುದರಿಂದ ಅದರ ಬೆಲೆಯನ್ನು ನಾನು ನಿರ್ಧರಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಪಂಚರು ಹೇಳಿದಂತೆ ಮೌಲೀಕರಿಸಿದ್ದೇನೆ ಎನ್ನುತ್ತಾರೆ. ಯಾವುದೇ ಮರವನ್ನು ಮೇಲ್ನೋಟಕ್ಕೆ ನೋಡಿದಾಗ ಅದು ಇಂತಹದೇ ಜಾತಿಯ ಮರ ಎಂದು ನನಗೆ ಹೇಳಲಾಗುವುದಿಲ್ಲ. ಆದ್ದರಿಂದ ಆ ಮರ ಯಾವಾಗ ಖರೀದಿಸಿದ್ದು ಎಷ್ಟು ಹಳೆಯದು ಮತ್ತು ಅದರ ಮೌಲ್ಯ ಎಷ್ಟು ಎಂದು ನನಗೆ ಅಂದಾಜಿಸಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಪಂಚರ ಅಭಿಪ್ರಾಯದಂತೆ ಗುರುತಿಸಿ ಮೌಲ್ಯಮಾಪನ ಮಾಡಿರುತ್ತೇವೆ ಎನ್ನುತ್ತಾರೆ. ಆ ಮನೆಯಲ್ಲಿ ಆರೋಪಿತರ ಮಗ ಇದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆಯೇ ಅವರನ್ನು ಆರೋಪಿತರ ಕುವೆಂಪುನಗರದ ಮನೆಯಿಂದ ಕರೆದುಕೊಂಡು ಹೋದದ್ದು ಎಂದರೆ ಸರಿಯಲ್ಲ. ನಾನು ಆರೋಪಿತರ ಕುವೆಂಪುನಗರದ ಮನೆಗೆ ಅವರ ಮಗನನ್ನು ಕರೆದುಕೊಂಡು ಬರಲು ಹೋದಾಗ ಆರೋಪಿತರು ನಿವೇಶನ ಸಂಖ್ಯೆ 1442 ತನಗೆ

2010ರಲ್ಲಿ ಕೆಹೆಚ್ ಬಿ ಯಿಂದ ಮಂಜೂರಾಗಿದ್ದು ಅದನ್ನು ತಾನು 2012ರಲ್ಲಿ ತಾನು ನೋಂದಾಯಿತ ದಾನಪತ್ರದ ಮೂಲಕ ತನ್ನ ಹೆಂಡತಿಯ ತಂತಿ ಆಶಾ ಕೋಂ ಮಂಜುನಾಥ್ ರವರ ಹೆಸರಿಗೆ ಬರೆದುಕೊಟ್ಟಿರುತ್ತೇನೆಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗೆಯೇ ಆ ಕಟ್ಟಡ ನಿರ್ಮಾಣಕ್ಕೂ ಸಹ ಸಂಬಂಧ ಇಲ್ಲ, ಅವರೇ ಕಟ್ಟಡ ಕಟ್ಟುತ್ತಿದ್ದಾರೆಂದು ಸಹ ತಿಳಿಸಿದ್ದರು ಎಂದರೆ ಸರಿಯಲ್ಲ. ಹಾಗೆಯೇ ಅವರು ಸೂಕ್ತ ವಿವರಣೆಯೊಂದಿಗೆ ತನಿಖಾಧಿಕಾರಿಗೆ ವಿವರಣೆ ನೀಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**